ಶ್ರೀ ಕೆ. ಎಚ್. ಶ್ರೀನಿವಾಸ್.—ಸರ್ಕಾರದಲ್ಲಿ ಬಯಲು ಸೀಮೆಯಲ್ಲಿ ಇದು ಎಷ್ಟು ವರ್ಕೌಟ್ ಆಗುತ್ತದೆ ಎನ್ನುವ ನಿಯಮ ಇದೆ. ಇದಕ್ಕೆ ಯಾವ ರೀತಿಯ ನಿಯಮ ಇದೆಯೋ ಅದಕ್ಕಿಂತ ಕಡಿಮೆ ಮಟ್ಟದಲ್ಲಿ ಮಲೆನಾಡಿನಲ್ಲಿ ವಿದ್ಯುಚ್ಛಕ್ತಿಯಿಂದ return ವರ್ಕೌಟ್ ಆಗುತ್ತಿದೆ. ಇದರ ಪ್ರಯೋಜನವನ್ನು ಮಲೆನಾಡಿನವರು ಪಡೆಯುತ್ತಿದ್ದಾರೆ. ಆದರೆ ಮಾನ್ಯ ಸದಸ್ಯರು ಫ್ರೀ ಆಗಿ ಎಲೆಕ್ಟ್ರಿಸಿಟಿಯನ್ನು ಹೈಡ್ರೋಎಲೆಕ್ಟ್ರಿಕ್ ಪ್ರಾಜೆಕ್ಟ್ ಇರತಕ್ಕ ಪ್ರದೇಶದವರಿಗೆ ಕೊಡಬೇಕು ಎನ್ನುವ ಸಲಹೆಗೆ ನಾನು ಏನನ್ನೂ ಹೇಳುವಂಥ ಪರಿಸ್ಥಿತಿಯಲ್ಲಿ ಇಲ್ಲ.

ಶ್ರೀ ಜಿ. ಮಾದೇಗೌಡ.—ರೂರಲ್ ಎಲೆಕ್ಟ್ರಿಫಿಕೇಷನ್ ಪ್ರೋಗ್ರಾಂನಲ್ಲಿ ಸರ್ಕಾರದವರು ಪಟ್ಟಿಯನ್ನು ಮಾಡಿ ಇಂಥಿಂಥ ಹಳ್ಳಿಗಳಿಗೆ ಎಲೆಕ್ಟ್ರಿಸಿಟಿ ಕೊಡಬೇಕು ಎಂದು ಮಾಡಿದ್ದಾರೆ. ಇತ್ತೀಚೆಗೆ ಸರ್ಕಾರದವರು ಯಾವ ಒಂದು ಕಾರ್ಯಕ್ರಮವನ್ನು ಈ ದಿಸೆಯಲ್ಲಿ ಹಾಕಿಕೊಂಡಿಲ್ಲ. ಆದರೂ ಕೆಲವು ಗ್ರಾಮಗಳಲ್ಲಿ ಪಟ್ಟಿಯಲ್ಲಿ ಹೆಸರು ಬಿಟ್ಟುಹೋಗಿದ್ದರೂ ಸಹ ಪ್ರಭಾವಯುತರಾದವರು ಸರ್ಕಾರಕ್ಕೆ ಮನವಿ ಸಲ್ಲಿಸಿ ತಮ್ಮ ಗ್ರಾಮಗಳನ್ನು ಎಲೆಕ್ಟ್ರಿಫೈ ಮಾಡಿಸಿಕೊಂಡಂಥ ಸನ್ನಿವೇಶಗಳೂ ಇವೆ. ಆದ್ದರಿಂದ ಈ ಪಟ್ಟಿಯಲ್ಲಿ ಕೆಲವು ಗ್ರಾಮಗಳಲ್ಲಿ ಇಲ್ಲದಿದ್ದರೂ ಸಹ, ಅಗತ್ಯವಾಗಿ ವಿದ್ಯುಚ್ಛಕ್ತಿ ಬೇಕಾದ ಸಂದರ್ಭದಲ್ಲಿ ಇಂಥ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುವುದಕ್ಕೆ ತಾವು ಮನಸ್ಸು ಮಾಡುತ್ತೀರಾ ?

ಶ್ರೀ ಕೆ. ಎಚ್. ಶ್ರೀನಿವಾಸ್.—ಪಟ್ಟಿಯಲ್ಲಿ ಹಳ್ಳಿಗಳ ಹೆಸರನ್ನು ಸೇರಿಸುವುದು ದೊಡ್ಡ ಪ್ರಶ್ನೆಯಲ್ಲ. ಪಟ್ಟಿಯಲ್ಲಿ ಸೇರಿಸಿರತಕ್ಕ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡಬೇಕು ಎನ್ನುವ ಒಂದು ಕಾರ್ಯಕ್ರಮವನ್ನು ನಾವು ಇಟ್ಟುಕೊಂಡು ಅದನ್ನು ಕಾರ್ಯಗತ ಮಾಡಿಕೊಂಡು ಹೋಗುತ್ತಿದ್ದೇವೆ. ಈ ಪಟ್ಟಿಯನ್ನು ತಯಾರು ಮಾಡಿರತಕ್ಕಂಥಾದ್ದು ಸ್ವಲ್ಪ ಕಾಲದ ಹಿಂದೆ, ಈ ಪಟ್ಟಿಗೆ ಅದಷ್ಟು ವಂಟ್ಟಿಗೆ ಸರ್ಕಾರದವರು ಮಾನ್ಯತೆ ಕೊಡುತ್ತಾ ಹೋಗಿದ್ದಾರೆ. ವಿಶೇಷವಾದಂಥ ಸಂದರ್ಭದಲ್ಲಿ ಮಾತ್ರ ಪಟ್ಟಿಯಲ್ಲಿ ಇಲ್ಲದೆ ಇರತಕ್ಕ ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಕೊಡತಕ್ಕಂಥಾ ಆಜ್ಞೆಯನ್ನು ಹೊರಡಿಸಿದ್ದಾರೆ ಅದು ಅಂಥ ಪ್ರಮಾದವೇನೂ ಆಗುವುದಿಲ್ಲ.

Co-operative Sugar Factory in S.K. District

890 SRI KAUP SANJEEV SHETTY (Coondapur).—Will the Minister of State for Co-operation be pleased to state :—

(*a*) the total amount of Share Capital collected in respect of the proposed Co-operative Sugar Factory in South Kanara District, out of this the amount of Share capital, collected from the ryots ;

(*b*) the progress achieved for the establishment of the Sugar Factoy ;

(*c*) when the Co-operative Sugar Factory was registered and the date on which the licence was issued to it and when the Executive Committee was constituted ;

(*d*) the impediments in starting the factory ?

SRI V. M. KUSNOOR (Minister of State for Co-operation).—

(*a*) The total share capital upto 15th July 1978 is Rs. 1,22,78,200 out of this amount Rs. 12,34,450 has been collected from the ryots.

(*b*) The K.I.A.D.B. has allotted 110 acres of land.

(*c*) Registration—R.C.S. 2756/73-74 dated 30th August 1973. Licence—I.L. 529-74 dated 6th November 1974. Executive Committee constituted on 26th September 1977 for a period of three years.

(*d*) Due to non-payment of share amount by the Members.

ಶ್ರೀ ಕಾಪು ಸಂಜೀವಶೆಟ್ಟಿ.—ಸ್ವಾಮಿ ಈ ಸಕ್ಕರೆ ಕಾರ್ಖಾನೆ ೧೯೭೩ರಲ್ಲಿ ರಿಜಿಸ್ಟರ್ ಆಗಿದೆ. ಕಳೆದ ೭ ವರ್ಷಗಳಲ್ಲಿ ಇದಕ್ಕೆ ಆಡಳಿತ ಮಂಡಳಿ ಆಗಿದೆ. ಆದರೂ ಈ ಸಕ್ಕರೆ ಕಾರ್ಖಾನೆಯು ಪ್ರಗತಿಯಿಂದ ಬಹಳ ಹಿಂದೆಬಿದ್ದಿದೆ. ಸರ್ಕಾರದಿಂದ ಷೇರು ಬಂಡವಾಳ ಬರಲಿಲ್ಲ. ಐದು ವರ್ಷವಾದರೂ ಸರ್ಕಾರದವರು ಎಷ್ಟು ಷೇರು ಬಂಡವಾಳ ಕೊಡುತ್ತಾರೆ ಮತ್ತು ತಮ್ಮ ಲಿಮಿಟ್ ಏನು ಎನ್ನುವುದನ್ನು ಕೇಳಬಹುದೇ ?

† SRI V.M. KUSHNUR.—From the last five years you have collected Rs. 12,34,450 from the ryots. But they will have to collect Rs. 30 lakhs more. That means, you have collected from non-members Rs. 36 lakhs and from Co-operative institution Rs. 12 lakhs 42,000. Altogether they will have to collect 30 lakhs more. Totally 60 lakhs of rupees will have to be collected from the share-holders and the Government will give Rs. 150 lakhs and after that we will place orders for the purchase of machineries.

ಶ್ರೀ ಯು. ಟಿ. ಫರೀದ್.—ನನಗೆ ತಿಳಿದಮಟ್ಟಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೋಸ್ಕರ ಷೇರ್ ಕಲೆಕ್ಟ್ ಮಾಡಿ, ಇದುವರೆಗೂ ಇದು ಆಗಲಿಲ್ಲವೆಂದು ಜನರು ತಮ್ಮ ಷೇರನ್ನು ವಾಪಸ್ ಕೊಡಿ ಎಂದು ಕೇಳುತ್ತಿದ್ದಾರೆ. ಏಕೆಂದರೆ, ಸರ್ಕಾರದವರು ಇದರ ಮೆಷಿನರಿಗೆ ಇಷ್ಟರವರೆಗೆ ಆರ್ಡರ್ ಮಾಡಲಿಲ್ಲ ಅನ್ನುವ ಕಾರಣವೂ ಒಂದು, ಸರ್ಕಾರದವರು ಇದಕ್ಕೆ ಆರ್ಡರ್ಸ್ ಪ್ಲೇಸ್ ಮಾಡುವುದಕ್ಕೆ ಹಿಂಜರಿಯುತ್ತಿದ್ದಾರೆಯೋ ಏನೋ ? ಗೊತ್ತಿಲ್ಲ. ಒಟ್ಟಿನಲ್ಲಿ ನಮ್ಮಲ್ಲಿ ಜನರಿಗೆ ಸಕ್ಕರೆ ಕಾರ್ಖಾನೆ ಬರುವುದಿಲ್ಲ, ಷೇರು ವಾಪಸ್ ತೆಗೆದುಕೊಳ್ಳಬೇಕು ಎನ್ನುವ ಅಭಿಪ್ರಾಯ ಬಂದಿದೆ. ಕೆಲವರು ಸಾಲಮಾಡಿ ಷೇರು ಕೊಟ್ಟಿರುತ್ತಾರೆ, ಅಂಥವರು ಬ್ಯಾಂಕ್‌ಗಳಿಗೆ ಇಂಟರೆಸ್ಟ್ ಕಟ್ಟಬೇಕು. ಆದ್ದರಿಂದ ಈ ಕಾರ್ಖಾನೆ ಬಹುಬೇಗ ಮಾಡುವಂತೆ ಕ್ರಮ ತೆಗೆದುಕೊಳ್ಳುತ್ತೀರಾ ?

SRI V.M. KUSHNOOR.—This sugar factory will have the investment of more than Rs. 3 crores. Out of that share-holders will have to subscribe Rs. 60 lakhs and the Government will give Rs. 150 lakhs. The rest of the money will have to come from other institutions like IFC, LIC, IDB and other institutions. Now the question is collection of share amount. Government is not lagging behind in this. They have to give their share. The main difficulties are that at least 3crores worth machineries are required, As soon as we place orders for machineries we will have to pay an advance amount. At the same time, we have to get letter of credit from the bank. Unless we have Rs. 3 crores it is not possible to place orders for the machineries. I have asked the Chairman yesterday. He said that there are three-four nationalised banks which come forward to finance. If they say that they are ready to finance, I am prepared to place orders for the machineries. Unless I get a commitment from the bank, it is not possible to place orders. That is the difficulty.

ಶ್ರೀಕಾಪು ಸಂಜೀವಶೆಟ್ಟಿ.—ಸಕ್ಕರೆ ಕಾರ್ಖಾನೆ ರಿಜಿಸ್ಟರ್ ಆಗಿ ಐದು ವರ್ಷವಾಗಿದ್ದು ಜನರಿಗೆ ಇದು ಆಗುತ್ತದೆಯೇ ಇಲ್ಲವೇ ಎಂಬ ಸಂಶಯ ಬಂದಿದೆ. ನಮ್ಮಲ್ಲಿರುವ ಐದು ಬ್ಯಾಂಕ್‌ಗಳವರು ಇದಕ್ಕೆ ಷೇರು ಕೊಡುತ್ತೇವೆಂದು ಮುಂದೆ ಬಂದಿದ್ದಾರೆ. ಕೆನರಾ ಬ್ಯಾಂಕ್‌ನವರು, ಸಿಂಡಿಕೇಟ್ ಬ್ಯಾಂಕ್‌ನವರು, ವಿಜಯಾ ಬ್ಯಾಂಕ್‌ನವರು, ಕರ್ನಾಟಕ ಬ್ಯಾಂಕ್‌ನವರು ಮತ್ತು ಕಾರ್ಪೊರೇಷನ್ ಬ್ಯಾಂಕ್‌ನವರೂ ಸಹ ಇದಕ್ಕೆ ಹಣ ಕೊಡಲು ಮುಂದೆಬಂದಿದ್ದಾರೆ. ಇವರು ಯಾವತ್ತೂ ಇದರ ಬಗ್ಗೆ ಹಿಂದೆ ಬಿದ್ದಿಲ್ಲ. ತಾವು ಬ್ಯಾಂಕ್‌ನವರನ್ನು ಯಾವಾಗ ಕರೆದು ಮಾತನಾಡಿದ್ದೀರಿ ಎನ್ನುವುದನ್ನು ತಿಳಿಸುತ್ತೀರಾ ?

SRI V. M. KUSHNOOR.—I have already assured that as soon as I get the firm commitment from the banks, I am going to place orders for the machineries.

ಶ್ರೀ ಕೆ. ರಾಮಭಟ್.—ಮಾನ್ಯ ಮಂತ್ರಿಗಳು ಒಂದು ಮಾತನ್ನು ಹೇಳಿದ್ದಾರೆ. ಏನೆಂದರೆ, ಅವರು ನ್ಯಾಷನಲೈಸ್ಡ್ ಬ್ಯಾಂಕ್‌ನವರನ್ನು ಸಂಪರ್ಕಿಸಿದ್ದಾರೆಂದು ಈ ರೀತಿಯಾಗಿ ಅವರನ್ನು ಸಂಪರ್ಕ ಮಾಡಿದ್ದು ಯಾವಾಗ? ಏಕೆಂದರೆ, ಇದು ಬಹಳ ದಿವಸವಾಯಿತು. ನಾವೂ ಸಹ ಬಹಳ ಆತುರದಲ್ಲಿದ್ದೇವೆ. ಆದ್ದರಿಂದ ತಾವು ಯಾವಾಗ ಇವರೊಂದಿಗೆ ಸಂಪರ್ಕ ಬೆಳಸಿದ್ದೀರಿ ಎನ್ನುವುದನ್ನು ತಿಳಿಸುತ್ತೀರಾ ?

SRI V. M. KUSHNOOR.—The Chairman was with me yesterday. Before one month also. I had asked him to get the firm commitment from the Bank. Yesterday, he said that he would bring the commitment as soon as possible. As soon as he brings that commitment from the Banks, I am going to place orders for the machineries.

1-30 P.M.

Providing work to agriculturists and labourers in Bijapur Taluk.

893. SRI B B. PATIL (Tikota).— Will the Minister for Revenue be pleased to state.—

(*a*) whether it has come to the notice of the Government that near scarcity conditions are prevailing in Bijapur taluk of Bijapur district, due to lack of rains;

(*b*) if so, the action the Government propose to take to provide work to the suffering agriculturists and landless labourers in Bijapur taluk;

(*c*) if not, the reasons therefor ?

SRI B. BASAVALINGAPPA (Minister for Revenue).—

(*a*) There were signs of near scarcity conditions during the last week of June 1978.

(*b*) and (*c*) The present situation does not warrant taking up relief works on account of rainfall during July 1978 and also because of the Departmental works which are already in progress.

ಶ್ರೀ ಬಿ. ಬಿ. ಪಾಟೀಲ್.— ಸ್ವಾಮಿ ನನ್ನ (ಅ) ಮತ್ತು (ಇ) ಪ್ರಶ್ನೆಗಳಿಗೆ ಉತ್ತರಿಸುತ್ತಾ, ೧೯೭೮ನೇ ಜುಲೈ ತಿಂಗಳಲ್ಲಿ ಮಳೆ ಬಿದ್ದಿರುವುದರಿಂದಾಗಿ ಹಾಗೂ ಇಲಾಖೆಯ ಕಾಮಗಾರಿಗಳು ಈಗಾಗಲೇ ಪ್ರಗತಿಯಲ್ಲಿರುವುದರಿಂದಾಗಿ ಪರಿಹಾರ ಕಾಮಗಾರಿಗಳನ್ನು ಸಧ್ಯದ ಪರಿಸ್ಥಿತಿಯಲ್ಲಿ ಕೈಕೊಳ್ಳುವ ವಿಷಯ ಉದ್ಭವಿಸುವುದಿಲ್ಲ, ಎಂದು ಹೇಳಿದ್ದೀರಿ. ಈ ಮಳೆ ತಡವಾಗಿ ಬಿದ್ದಿರುವುದರಿಂದ ಅಲ್ಲಿಯ ಜನರು ಜೀವನ ಮಾಡುವುದಕ್ಕೆ ಬಹಳ ತೊಂದರೆಯಾಗಿದೆ. ಆದುದರಿಂದ ಅವರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಪರಿಹಾರ ಕಾಮಗಾರಿಗಳನ್ನು ಏನಾದರೂ ತೆಗೆದುಕೊಳ್ಳುತ್ತೀರಾ ಎಂದು ತಮ್ಮನ್ನು ಕೇಳಬಯಸುತ್ತೇನೆ.